**ಸಾಕ್ಷಿಯನ್ನು ದಿನಾಂಕ *25.10.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಗಾಯಾಳುವಿಗೆ ಸಂಬಂಧಪಟ್ಟಂತೆ ಕೇಸ್ ಶೀಟ್ ಅನ್ನು ಹಾಜರುಪಡಿಸುತ್ತಿದ್ದೇನೆ. ಸಾಕ್ಷಿದಾರರು ಕೇಸ್ ಶೀಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–13 ಅಂತ ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಎಂ.ಒ–1 ರಿಂದ ಹಲ್ಲೆ ಮಾಡಿದರೆ ನಿಪಿ–11 ರಲ್ಲಿ ಹೇಳಿರುವಂತಹ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ನಿಪಿ–11 ರಲ್ಲಿ 3 ಗಾಯಗಳನ್ನು ತೋರಿಸಿದ್ದು ನಿಪಿ–13 ರಲ್ಲಿ ಒಟ್ಟು 5 ಗಾಯಗಳನ್ನು ತೋರಿಸಿದ್ದು ನಿಪಿ–13 ರಲ್ಲಿ ಇರುವ 1 ಮತ್ತು 2 ರಲ್ಲಿ ಹೇಳಿರುವಂತಹ ಗಾಯ ನಿಪಿ–11 ರಲ್ಲಿನ 3 ನೇ ಗಾಯಕ್ಕೆ 2 ಗಾಯಗಳು ಸೇರುತ್ತವೆ. ನಿಪಿ–13 ರ 5 ನೇ ಗಾಯ ನಿಪಿ–11 ರಲ್ಲಿನ 2 ನೇ ಗಾಯಕ್ಕೆ ಸೇರುತ್ತದೆ. ಗಾಯಾಳುವಿನ ಕೆಳ ತುಟಿಯಲ್ಲಿ facial nerve injury ಆಗಿತ್ತು ಆದ್ದರಿಂದ ಗಾಯಾಳುವಿನ ತುಟಿಗೆ paralysis ಆಗಿದ್ದರಿಂದ ಗಾಯದ ಪ್ರಮಾಣ ಪತ್ರದಲ್ಲಿ 3 ನೇ ಗಾಯದ ಆಧಾರದ ಮೇಲೆ ತೀವ್ರ ಸ್ವರೂಪದ ಗಾಯ ಎಂದು ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಗಾಯಾಳು ನಮ್ಮ ಆಸ್ಪತ್ರೆಗೆ ಬರುವ ಪೂರ್ವದಲ್ಲಿ ಆ ಗಾಯಗಳಿಗೆ ಚಿಕಿತ್ಸೆ ಪಡೆದುಕೊಂಡಿರಲಿಲ್ಲ. ದಾಖಲೆಗಳು ಮತ್ತು ಗಾಯಾಳುವಿನ ಹೇಳಿಕೆ ಪ್ರಕಾರ ದಿನಾಂಕ 05.10.2020 ರಂದು ಮಧ್ಯಾಹ್ನ 1.15 ಗಂಟೆಗೆ ಗಾಯಾಳುವಿಗೆ ಗಾಯಗಳು ಆಗಿದ್ದು ನಮ್ಮ ಆಸ್ಪತ್ರೆಗೆ ಚಿಕಿತ್ಸೆ ಸಲುವಾಗಿ ಅದೇ ದಿನ 1.20 ಗಂಟೆಗೆ ಬಂದಿದ್ದು ನಾನು ಗಾಯಾಳುವಿಗೆ 3.45 ಗಂಟೆಗೆ ಚಿಕಿತ್ಸೆ ನೀಡಿರುತ್ತೇನೆ. ಗಾಯಾಳುವಿನ ಹೇಳಿಕೆ ಪ್ರಕಾರ ಮತ್ತು ದಾಖಲೆಗಳ ಪ್ರಕಾರ ಗಾಯಾಗಳು ಆದ 5 ನಿಮಿಷಕ್ಕೆ ಗಾಯಾಳು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ನಾನು ಗಾಯಾಳುವಿಗೆ ಚಿಕಿತ್ಸೆ ನೀಡುವ ಪೂರ್ವದಲ್ಲಿ ಗಾಯಾಳುವಿಗೆ ಯಾವುದೇ ಚಿಕಿತ್ಸೆ ಆಗಿರಲಿಲ್ಲ. ನಾನು ಗಾಯಾಳುವನ್ನು ನೋಡಿದಾಗ ಗಾಯಗಳಿಂದ ರಕ್ತ ಸ್ರಾವ ಆಗುತ್ತಿತ್ತು. ಗಾಯಾಳು ಪ್ರಜ್ಞಾವಸ್ಥೆಯಲ್ಲಿ ಮತ್ತು ಮಾತನಾಡುವ ಸ್ಥಿತಿಯಲ್ಲಿ ಇದ್ದರು. ಗಾಯಾಳುವನ್ನು ಯಾರು ಕರೆದಕೊಂಡು ಬಂದಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ಗಾಯಳುವನ್ನು ಯಾರಾದರೂ ಕರೆದುಕೊಂಡು ಬಂದರೆ ಆ ಬಗ್ಗೆ ವೈದ್ಯಕೀಯ ದಾಖಲೆಗಳಲ್ಲಿ ಉಲ್ಲೇಖ ಇರುತ್ತದೆ ಎಂದರೆ ಸರಿ. ನಾನು ಪುನಃ ಹೇಳುವುದೇನೆಂದರೆ ವೈದ್ಯಕೀಯ ದಾಖಲೆಗಳಲ್ಲಿ ಗಾಯಾಳುವನ್ನು ಕುಶಾಲ್ ಎಂಬುವರು ಕರೆದುಕೊಂಡು ಬಂದ ಬಗ್ಗೆ ಉಲ್ಲೇಖ ಇರುತ್ತದೆ. ನಾನು ಗಾಯಾಳುವಿಗೆ ಚಿಕಿತ್ಸೆ ನೀಡುವ ಪೂರ್ವದಲ್ಲಿ ಪೊಲೀಸ್ ಇಂಟೀಮೇಶನ್ ಹೋಗಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಂತರದಲ್ಲಿಯೂ ಸಹ ನನಗೆ ಗೊತ್ತಾಗಲಿಲ್ಲ.

ವೈದ್ಯಕೀಯ ದಾಖಲೆಗಳ ಪ್ರಕಾರ ಗಾಯಾಳುವಿಗೆ ಯಾರಿಂದ ಗಾಯಾಗಳು ಆಗಿದ್ದವು ಎಂದು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿ. ರಿಜಿಸ್ಟರ್ ನಲ್ಲಿ unknown weopen ಎಂದು ಉಲ್ಲೇಖ ಇರುತ್ತದೆ. ಸದರಿ ಮಾಹಿತಿಯನ್ನು ಗಾಯಾಳುವಿನ ಜೊತೆ ಬಂದಿದ್ದ ಕುಶಾಲ್ ಕೊಟ್ಟಿರಬಹುದು. ಗಾಯಾಳುವನ್ನು ನಾನು ಗಾಯಗಳ ಬಗ್ಗೆ ವಿಚಾರಣೆ ಮಾಡಿರಲಿಲ್ಲ. ನಿಪಿ-11 ಮತ್ತು 13 ರಲ್ಲಿ ಹೇಳಿರುವ ಗಾಯಗಳು ಹರಿತವಾದ ಯಾವುದೇ ಆಯುಧದಿಂದ ಆಗುವಂತಹ ಗಾಯಗಳು ಇರುತ್ತವೆ. ನಾನು ನಿಪಿ-11 ಮತ್ತು 13 ರಲ್ಲಿ ಗಾಯಗಳ ವಯಸ್ಸನ್ನು ಹೇಳಿರಲಿಲ್ಲ ಎಂದರೆ ಸರಿ. ನಿಪಿ-11 ರಲ್ಲಿ ಗಾಯಗಳ ವಿವರಣೆ ಹೇಳಿರಲಿಲ್ಲ ಎಂದರೆ ಸರಿ. ನಿಪಿ-11ರಲ್ಲಿ ಗಾಯಗಳ ಉದ್ದ, ಆಳ ಮತ್ತು ಅಗಲ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-11 ರಲ್ಲಿ ಇರುವಂತಹ ಸಹಿ ನನ್ನ ಸಹಿ ಇರುತ್ತದೆ. ಕೇಸ್ ಶೀಟ್ ನೋಡದೆ ನಾನು ನಿಪಿ-11 ರ ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ. ನಾನು ನನ್ನ ನೆನಪಿನ ಆಧಾರದ ಮೇಲೆ ನಿಪಿ-11 ರಲ್ಲಿ ಹೇಳಿರುವ ಗಾಯಗಳನ್ನು ಹೇಳಿರುತ್ತೇನೆ. ಸಾಮಾನ್ಯವಾಗಿ ಗಾಯದ ಪ್ರಮಾಣ ಪತ್ರವನ್ನು ಎಂ.ಎಲ್.ಸಿ ಮತ್ತು ಕೇಸ್ ಶೀಟ್ ಆಧಾರದ ಮೇಲೆ ನೋಡಿ ಗಾಯದ ಪ್ರಮಾಣ ಪತ್ರ ನೀಡಬೇಕಾಗಿರುತ್ತದೆ ಎಂದರೆ ಸರಿ. ನಿಪಿ-11 ರ 3 ನೇ ಗಾಯ ಎಡ ಕೆನ್ನೆಗೆ ಸಂಬಂಧಪಟ್ಟಂತಹ ಗಾಯ ಇರುತ್ತದೆ. ನಿಪಿ-11 ರ 1 ಮತ್ತು 2 ನೇ ಗಾಯ ಹಣೆಯ ಮೇಲ್ಭಾಗ ಮತ್ತು ಎಡ ಕಣ್ಣಿನ ಮೇಲ್ಭಾಗ ಇರುತ್ತದೆ. ನಿಪಿ-13 ರಲ್ಲಿ ಹೇಳಿರುವ 1 ಮತ್ತು 2 ನೇ ಗಾಯಗಳು ನಿಪಿ-11 ರಲ್ಲಿ ಹೇಳಿರುವಂತಹ 3 ನೇ ಗಾಯಕ್ಕೆ ಸಂಬಂಧಪಟ್ಟದು ಇರುತ್ತದೆ. ನಿಪಿ-13 ರಲ್ಲಿ

ಹೇಳಿರುವಂತಹ ಎಲ್ಲಾ ಗಾಯಗಳನ್ನು ನಿಪಿ–11 ರಲ್ಲಿ ನಮೂದು ಮಾಡಲು ನನಗೆ ತೊಂದರೆ ಇರಲಿಲ್ಲ. ನಿಪಿ–13 ರಲ್ಲಿ ಹೇಳಿರುವಂತಹ 5 ಗಾಯಗಳ ಪೈಕಿ 1 ನೇ ಗಾಯ ತೀವ್ರ ಸ್ವರೂಪದ ಗಾಯ ಇದ್ದು ಉಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯ ಇರುತ್ತದೆ. ನಿಪಿ–11 ರಲ್ಲಿ ಹೇಳಿರುವಂತಹ ಗಾಯಗಳ ಪೈಕಿ 3 ನೇ ಗಾಯ ತೀವ್ರ ಸ್ವರೂಪದ ಗಾಯ ಇರುತ್ತದೆ ನಾನು ನಿಪಿ–11 ರಲ್ಲಿ 3 ನೇ ಗಾಯ ತೀವ್ರ ಸ್ವರೂಪದ ಗಾಯ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಮುಳ್ಳು ತಂತಿ  ಮೇಲೆ ಬಿದ್ದರೆ ನಿಪಿ–11 ಮತ್ತು 13 ರಲ್ಲಿ ಹೇಳಿರುವಂತಹ ಗಾಯಗಳಗು ಆಗುವ ಸಾಧ್ಯತೆ ಇರುತ್ತದೆ. ನಿಪಿ–11 ಅನ್ನು ನೀಡುವ ಸಂದರ್ಭದಲ್ಲಿ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ ನಾನು ಪುನಃ ಹೇಳುವುದೇನೆಂದರೆ ಕೇಸ್ ಶೀಟ್ ಅನ್ನು ನೋಡಿ ಬರೆದಿದ್ದೆ. ನಿಪಿ–11 ಅನ್ನು ನೀಡುವಾಗ ನಿಪಿ–13 ಅನ್ನು ನೋಡಿ ಬರೆಯಲು ನನಗೆ ತೊಂದರೆ ಇರಲಿಲ್ಲ ಆ ವೇಳೆಯಲ್ಲಿ ನಾನು ಕೆಲಸದ ಒತ್ತಡದಲ್ಲಿ ಇದ್ದೆ. ನನಗೆ ಗಾಯಾಳುವಿನ ಬಗ್ಗೆಯಾಗಲೀ ಪ್ರಕರಣದ ಬಗ್ಗೆಯಾಗಲೀ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಎಂ.ಎಲ್.ಸಿ ಅಲ್ಲಿ ನಾನು ಗಾಯಾಳುವಿಗೆ ಚಿಕಿತ್ಸೆ ನೀಡಿದ್ದೆ ಎನ್ನುವ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎಂದರೆ ಸರಿ. ನಾನು ಗಾಯಾಳುವಿಗೆ ಯಾವುದೇ ಚಿಕಿತ್ಸೆ ನೀಡದೇ ಇದ್ದರೂ ಸಹ ತನಿಖಾಧಿಕಾರಿಯವರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**